**ಸಿ.ಡಬ್ಲೂ.-08/ ಪಿ.ಡಬ್ಲೂ-04**

**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 1795/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ಜಗದೀಶ ಶೆಟ್ಟಿ |
| ತಂದೆಯ ಹೆಸರು | : | ನಾಗಶೆಟ್ಟಿ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಪೋಲೀಸ್ ಮುಖ್ಯ ಪೇದೆ, ಸಿ.ಹೆಚ್.ಸಿ. 318, ಜಯಪುರ ಪೋಲೀಸ್ ಠಾಣೆ, ಮೈಸೂರು ತಾ. |
| ವಾಸಸ್ಥಳ | : | ಹೆಚ್.ಡಿ. ಕೋಟೆ ಟೌನ್. |

**ಸಾಕ್ಷಿಯನ್ನು ದಿನಾಂಕಃ 15.01.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸ. ಸ. ಅ. ರವರಿಂದಃ**

ನಾನು ದಿನಾಂಕಃ 27.02.2017 ರಿಂದ ದಿನಾಂಕಃ 15.09.2022 ರವರೆಗೆ ಹೆಚ್.ಡಿ. ಕೋಟೆ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 07.11.2020 ರಂದು ಬಾತ್ಮೀದಾರರ ಮಾಹಿತಿ ಮೇರೆಗೆ ಹಳ್ಳದಮನುಗನಹಳ್ಳಿ ಗ್ರಾಮದ ಬಸ್ ನಿಲ್ದಾಣದಲ್ಲಿ ಜಯಲಿಂಗ ಎಂಬ ವ್ಯಕ್ತಿ ಆಕ್ರಮವಾಗಿ ಸಾರ್ವಜನಿಕರಿಗೆ ಮಧ್ಯವನ್ನು ಕುಡಿಯಲು ಸ್ಥಳಾವಕಾಶ ಮಾಡಿಕೊಟ್ಟಿರುವ ಬಗ್ಗೆ ಚಾಸಾ-1 ರವರು ನನ್ನನ್ನು ಮತ್ತು ನಮ್ಮ ಠಾಣಾ ಸಿಬ್ಬಂಧಿಗಳಾದ ಚಾಸಾ-4 ರಿಂದ ಚಾಸಾ-7 ರವರನ್ನು ಕರೆಸಿ ಹಳ್ಳದಮನುಗನಹಳ್ಳಿ ಗೇಟ್ ಬಳಿ ಬರುವಂತೆ ಹೇಳಿದ್ದು, ಪಂಚರುದಾರರಾದ ಚಾಸಾ-2 - ಅಕ್ಷಯ್ ಮತ್ತು ಚಾಸಾ -3 ರಾಜೇಶರವರನ್ನು

ಹೆಚ್.ಡಿ. ಕೋಟೆಯಿಂದ ಕರೆದುಕೊಂಡು ಹೋಗಿರುತ್ತೇವೆ. ನಂತರ ನಾವುಗಳು ಹಳ್ಳದಮನುಗನಹಳ್ಳಿ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಇರುವ ಜಯಲಿಂಗ ಎಂಬ ವ್ಯಕ್ತಿಯನ್ನು ಹಿಡಿದು ಪರಿಶೀಲಿಸಿದಾಗ ಆತ ಆಕ್ರಮವಾಗಿ ಸಾರ್ವಜನಿಕರಿಗೆ ಮಧ್ಯವನ್ನು ಕುಡಿಯಲು ಸ್ಥಳಾವಕಾಶ ಮಾಡಿಕೊಟ್ಟಿರುವ ಬಗ್ಗೆ ನಮಗೆ ಗೊತ್ತಾಗಿದ್ದು ನಂತರ ಆತನನ್ನು ನಮ್ಮ ವಶಕ್ಕೆ ಪಡೆದು, ಮಧ್ಯದ ಪೌಚ್ ಗಳನ್ನು ಅಮಾನತ್ತುಪಡಿಸಿಕೊಂಡು ವಾಪಸ್ ಹೆಚ್.ಡಿ. ಕೋಟೆಗೆ ಬರುವಾಗ ಮಧ್ಯಾಹ್ನ 03.30 ಗಂಟೆ ಸಮಯಕ್ಕೆ ಕ್ಯಾತನಹಳ್ಳಿ ಗೇಟ್ ಬಳಿ ಚಾಸಾ-1 ರವರಿಗೆ ಬಾತ್ಮೀದಾರರು ಸಿಕ್ಕಿ ಗಂಗಡಹೊಸಳ್ಳಿಯಲ್ಲಿರುವ ಒಂದು ಪೆಟ್ಟಿಗೆಪಿ ಅಂಗಡಿಯಲ್ಲಿ ಆಕ್ರಮವಾಗಿ ಮಧ್ಯದ ಪ್ಯಾಕೆಟ್ ಗಳನ್ನು ಮಾರಾಟ ಮಾಡುವುದಾಗಿ ಮಾಹಿತಿ ನೀಡಿದಾಗ ಚಾಸಾ-1 ರವರು ಸಿಬ್ಬಂಧಿಗಳಾದ ನಮ್ಮನ್ನು ಮತ್ತು ಪಂಚರುದಾರರನ್ನು ಗಂಗಡಹೊಸಳ್ಳಿ ಗ್ರಾಮದಲ್ಲಿ ರಸ್ತೆಯ ಫುಟ್ ಪಾತ್ ನಲ್ಲಿರುವ ನಂಜುಂಡೇಗೌಡರವರಿಗೆ ಸೇರಿದ ಅಂಗಡಿಯ ಮೇಲೆ ದಾಳಿ ಮಾತಿ ಮಧ್ಯದ ಪ್ಯಾಕೆಟ್ ಗಳನುನ ಅಮಾನತ್ತುಪಡಿಸಿಕೊಂಡು ನಂತರ ಸಂಜೆ 05.00 ಗಂಟೆಗೆ ಆರೋಪಿ ಶೆಟ್ಟಿಗೌಡ ಎಂಬುವವರ ಅಂಗಡಿ ಮೇಲೆ ದಾಳಿ ಮಾಡಿ ಪರಿಶೀಲಿಸಿ ನೋಡಿದಾಗ ಅಂಗಡಿಯಲ್ಲಿ 180 ಎಂ.ಎಲ್. ನ 04 ಓಲ್ಡ್ ಟಾವರಿನ್ ವಿಸ್ಕಿಯ ಪೌಚ್ ಗಳು ಮತ್ತು 90 ಎಂ.ಎಲ್. ನ 30 ಒರಿಜಿನಲ್ ಛಾಯ್ಸ್ ವಿಸ್ಕಿಯ ಪೌಚ್ ಗಳು ಇರುವುದು ಕಂಡುಬಂದಿರುತ್ತದೆ. ಆರೋಪಿಯು ಸಹ ಅಂಗಡಿಯಲ್ಲಿ ಇದ್ದನು. ನಂತರ ಆರೋಪಿಗೆ ಚಾಸಾ-1 ರವರು ಪರವಾನಗಿ ಕೇಳಲಾಗಿ ಆತ ಇಲ್ಲ ಎಂದು ತಿಳಿಸಿದ್ದರಿಂದ ಆತನ ವಶದಲ್ಲಿದ್ದ 34 ಮಧ್ಯದ ಪೌಚ್ ಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ **A** ಎಂಬ ಅಕ್ಷರದಿಂದ ಸೀಲ್ ಮಾಡಿ ಸಂಜೆ 05.00-06.00 ಗಂಟೆಯವರೆಗೆ ಪಂಚರುದಾರರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ

ಅಮಾನತ್ತುಪಡಿಸಿಕೊಂಡಿರುತ್ತೇವೆ. ನಂತರ ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಹಿಂದಿರುಗಿ ನಂತರ ಆರೋಪಿಯ ವಿರುದ್ಧ ಚಾಸಾ–1 ರವರು ಪ್ರಕರಣ ದಾಖಲು ಮಾಡಿರುತ್ತಾರೆ. ಮಹಜರ್ ಅನ್ನು ನನ್ನ ಹಸ್ತಾಕ್ಷರದಿಂದ ಬರೆದಿರುತ್ತೇನೆ. ಅಮಾನತ್ತು ಮಹಜರ್ ಅನ್ನು ಈಗಾಗಲೇ ನಿ.ಪಿ.–1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.–1(ಸಿ)** ಎಂದು ಗುರುತಿಸಲಾಯಿತು. ಘಟನಾ ಸಂಬಂಧ ನಾನು ಚಾಸಾ–1ರವರ ಮುಂದೆ ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ. ಮಧ್ಯದ ಪೌಚ್ ಗಳು ಈಗಾಗಲೇ ಮುದ್ದೆಮಾಲು–1 ರಿಂದ ಮುದ್ದೆಮಾಲು–34 ಎಂದು ಮತ್ತು 01 ಪ್ಲಾಸ್ಟಿಕ್ ಚೀಲವನ್ನು ಮುದ್ದೆಮಾಲು–35 ಎಂದು ಗುರುತಿಸಲಾಗಿದೆ. ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಜಿ.ಎನ್.ಎನ್. ವಕೀಲರಿಂದಃ**

ಚಾಸಾ–1 ರವರಿಗೆ ಬಾತ್ಮೀ ಬಂದಾಗ ನಾನು ಠಾಣಾ ಕರ್ತವ್ಯದಲ್ಲಿದ್ದೆ. ನಾನು, ಚಾಸಾ–4 ರಿಂದ ಚಾಸಾ–7 ಮತ್ತು ಇಬ್ಬರು ಪಂಚರುದಾರರು ಖಾಸಗಿ ವಿಂಗರ್ ವಾಹನದಲ್ಲಿ ದಾಳಿ ಮಾಡಲು ಹೋಗಿರುತ್ತೇವೆ. ನನ್ನ ಹೇಳಿಕೆಯಲ್ಲಿ ವಿಂಗರ್ ವಾಹನದಲ್ಲಿ ಹೋಗಿರುತ್ತೇವೆಂದು ಬರೆಸಿರುತ್ತೀರಾ ಎಂದರೆ ಇಲ್ಲಾ ಎನ್ನುತ್ತಾರೆ. ಹಳ್ಳದಮನುಗನಹಳ್ಳಿ ಗ್ರಾಮಕ್ಕೆ ಹೋಗಬೇಕಾದರೆ ಗಂಗಡಹೊಸಹಳ್ಳಿ ಮತ್ತು ಕ್ಯಾತನಹಳ್ಳಿ ಗ್ರಾಮಗಳನ್ನು ಹಾದು ಹೋಗಬೇಕಾಗುತ್ತದೆಂದರೆ ಸರಿ. ಹಳ್ಳದಮನುಗನಹಳ್ಳಿ ಮತ್ತು ಕ್ಯಾತನಹಳ್ಳಿ ಗ್ರಾಮಕ್ಕೆ 14–15 ಕಿ.ಮೀ. ಅಂತರವಿದೆ ಎಂದರೆ ಸಾಕ್ಷಿಯು 06–07 ಕಿ.ಮೀ. ಎನ್ನುತ್ತಾರೆ. ದಾಳಿ ಮಾಡಿರುತ್ತೇವೆಂದು ನಾವು ಹೇಳಿದ್ದು, ದಾಳಿ ಮಾಡುವ ಪೂರ್ವದಲ್ಲಿ ಹಳ್ಳದಮನುಗನಹಳ್ಳಿ

ಗ್ರಾಮದಲ್ಲಿರುವ ಎಷ್ಟು ಅಂಗಡಿಗಳನ್ನು ತಪಾಸಣೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಒಂದು ಅಂಗಡಿ ಎಂದು ನುಡಿದು, ಗಂಗಡಹೊಸಹಳ್ಳಿಯಲ್ಲಿ 02 ಅಂಗಡಿ ಎಂದು ನುಡಿಯುತ್ತಾರೆ. ಅಂಗಡಿ ಯಾರಿಗೆ ಸೇರಿದ್ದು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಸದರಿ ಅಂಗಡಿ ಫುಟ್ ಪಾತ್ ಅಂಗಡಿ ಎಂದು ನುಡಿಯುತ್ತಾರೆ. ನಾನು ಮತ್ತು ಚಾಸಾ-1, ಚಾಸಾ-4 ರಿಂದ ಚಾಸಾ-7 ಯಾವುದೇ ಘಟನಾ ಸ್ಥಳಕ್ಕೆ ಹೋಗಿಲ್ಲ ಮತ್ತು ದಾಳಿ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ಠಾಣಾ ಮೇಲಾಧಿಕಾರಿಯಾಗಿರುವುದರಿಂದ ಠಾಣಾ ಅಂಕಿ-ಅಂಶ ತೋರಿಸಲು ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆಂದರೆ ಸರಿಯಲ್ಲ. ಘಟನೆ ನಡೆಯಿತು ಎಂದು ಹೇಳಿದ ಸ್ಥಳದಲ್ಲಿ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಮತ್ತು ಯಾವುದೇ ಮುದ್ದೆಮಾಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲು-1 ರಿಂದ ಮುದ್ದೆಮಾಲು-35 ರ ಮೇಲೆ ತಾವು ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ನಾನು ಸಹಿ ಮಾಡಿಲ್ಲ, ಚಾಸಾ-2 ಮತ್ತು ಚಾಸಾ-3 ಸಹಿ ಮಾಡಿರುತ್ತಾರೆಂದು ನುಡಿಯುತ್ತಾರೆ. ಆರೋಪಿತನಿಗು ಮತ್ತು ಮುದ್ದೆಮಾಲುಗಳಿಗು ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**